# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 06 |
| ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ-ಬೆಟಗೇರಿ ಅವಳಿ ನಗರಕ್ಕೆ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಬ್ಯಾರೇಜ್ ನಿಂದ ಎಲ್ಲಾ ವಾರ್ಡ್ ಗಳಿಗೆ ಎಷ್ಟು ದಿನಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ ಪ್ರತಿ ವಾರ್ಡಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು. | ಗದಗ-ಬೆಟಗೇರಿ ಅವಳಿ ನಗರದ 1 ರಿಂದ 35 ವಾರ್ಡ್‌ಗಳ ಪೈಕಿ 8 ವಾರ್ಡ್‌ಗಳಿಗೆ ಸರಾಸರಿ 2 ದಿನಗಳಿಗೊಮ್ಮೆ ಉಳಿದ 27 ವಾರ್ಡ್‌ಗಳಿಗೆ 7 ರಿಂದ 8 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. |
| ಆ) | 24X7 ಪೂರೈಕೆ ಯೋಜನೆಯು ಪೂರ್ಣಗೊಂಡಿದೆಯೇ;<br>ಹಾಗಿದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು;<br>(ವಿವರ ನೀಡುವುದು) | ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ) ಯೋಜನೆಯಡಿ 24X7 ಕುಡಿಯುವ ನೀರಿನ ಯೋಜನೆಯನ್ನು ದಿನಾಂಕ:24-12-2014 ರಂದು ಮೆ\|\| ಎಸ್‌ಪಿಎಂಎಲ್ ಇನ್‌ಫ್ರಾ ಲಿ., ಗುರ್‌ಗಾವ್, ನವದೆಹಲಿ ಇವರಿಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ಅವಧಿ 30 ತಿಂಗಳು ಅಂದರೆ, ದಿನಾಂಕ:23-06-2017 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಗದಗ-ಬೆಟಗೇರಿ ನಗರವನ್ನು ಭೌಗೋಳಿಕಕ್ಕೆ ಅನುಗುಣವಾಗಿ 14 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅದರಲ್ಲಿ 7 ವಲಯಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಹೊಸ ಕೊಳವೆ ಮಾರ್ಗದಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 7 ವಲಯಗಳಲ್ಲಿ ಕಾಮಗಾರಿಯು ಅಪೂರ್ಣಗೊಂಡಿರುವುದರಿಂದ ಬಾಗಶಃ ಹೊಸ ಕೊಳವೆ ಮಾರ್ಗದ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.<br><br>ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಹೆಚ್ಚುವರಿ ಪರಿಮಾಣಗಳ ಅವಶ್ಯಕತೆ ಬಂದ ಕಾರಣ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು ದಿನಾಂಕ:30-04-2023 ರೊಳಗೆ ಕಾಮಗಾರಿಯನ್ನು ಸಂಪೂರ್ಣಗೊಳಿಸಲು ಅಂತಿಮ ಗಡುವು ನೀಡಲಾಗಿತ್ತು. |

ಆದರೆ, ಗುತ್ತಿಗೆದಾರರು ಡಿಸೆಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಗುತ್ತಿಗೆದಾರರು ಸಾಧಿಸಿರುವ ಪ್ರಗತಿಯ ವಿವರ ಈ ಕೆಳಕಂಡಂತಿದೆ:

| ಕ್ರ. ಸಂ | ಕಾಮಗಾರಿ ವಿವರ | ಪ್ರಗತಿ | ಬಾಕಿ |
|---|---|---|---|
| 1 | ವಿತರಣಾ ಜಾಲ (ಹೆಚ್‌ಡಿಪಿಇ) | 466.03 ಕಿ.ಮೀ | 2.18 ಕಿ.ಮೀ |
| 2 | ವಿತರಣಾ ಜಾಲ (ಡಿಐ) | 14.62 ಕಿ.ಮೀ | 2.21 ಕಿ.ಮೀ |
| 3 | ಮನೆ ಸಂಪರ್ಕ | 35012 ಸಂಖ್ಯೆ | 5566 ಸಂಖ್ಯೆ |
| 4 | ಮೇಲೆತ್ತರದ ಜಲಸಂಗ್ರಹಗಾರ | 3 ಸಂಖ್ಯೆ | 2 ಸಂಖ್ಯೆ |
| 5 | ಫ್ಲೋ ಮೀಟರ್ಸ್ | 9 ಸಂಖ್ಯೆ | 13 ಸಂಖ್ಯೆ |
| 6 | ವಾಲ್ವ್ ಅಳವಡಿಕೆ | 549 ಸಂಖ್ಯೆ | 639 ಸಂಖ್ಯೆ. |

ಆದರೆ, ಗುತ್ತಿಗೆದಾರರು ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ:

- ಗುತ್ತಿಗೆಯನ್ನು ಏಕೆ ರದ್ದುಗೊಳಿಸಬಾರದೆಂದು ದಿನಾಂಕ:27-06-2023 ರಂದು ನೋಟೀಸ್ ಜಾರಿಗೊಳಿಸಲಾಗಿದೆ.
- ಬ್ಯಾಂಕ್ ಗ್ಯಾರಂಟಿಯನ್ನು ನಗಧೀಕರಿಸಲು ಬ್ಯಾಂಕ್ ನವರಿಗೆ ಪತ್ರ ಬರೆಯಲಾಗಿದೆ.
- ಗುತ್ತಿಗೆದಾರರು ನೋಟೀಸ್ ಹಾಗೂ ಬ್ಯಾಂಕ್ ಗ್ಯಾರಂಟಿ ನಗಧೀಕರಿಸುವುದನ್ನು ಪ್ರಶ್ನಿಸಿ ಕೊಲ್ಕತ್ತಾ ನ್ಯಾಯಾಲಯದಲ್ಲಿ ದಿನಾಂಕ:05-07-2023 ರಲ್ಲಿ ತಡೆ ಆಜ್ಞೆ (Injunction Order) ತಂದಿರುತ್ತಾರೆ.
- ನುರಿತ ವಕೀಲರನ್ನು ನೇಮಿಸಲಾಗಿದ್ದು, ಕೊಲ್ಕತ್ತಾ ನ್ಯಾಯಾಲಯದಲ್ಲಿ ತಡೆ ಆಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.
- Arbitrator ಅನ್ನು ನೇಮಿಸಲು ಗುತ್ತಿಗೆದಾರರು ಉಚ್ಚನ್ಯಾಯಾಲಯಕ್ಕೆ ಹೋದ ಕಾರಣ, ನ್ಯಾಯಾಲಯದಲ್ಲಿ ಪ್ರಕರಣ ಪ್ರಗತಿಯಲ್ಲಿರುತ್ತದೆ.

ಮಾನ್ಯ ನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವುಗೊಂಡ ನಂತರ ನಿಯಮಾನುಸಾರ ಕ್ರಮವಹಿಸಿ ಕಾಮಗಾರಿಯನ್ನು ಪೂರ್ಣಗೊಳಿಸಬಹುದಾಗಿದೆ.

| | | |
|---|---|---|
| ಇ) | ಪಾಪನಾಶಿ ಗ್ರಾಮದಲ್ಲಿರುವ ನೀರು ಶುದ್ದೀಕರಣ ಘಟಕದಿಂದ ಗದಗ-ಬೆಟಗೇರಿ A-Point ವರೆಗೆ ಅಳವಡಿಸಿರುವ ಪೈಪುಗಳು ಗುಣಮಟ್ಟದಿಂದ ಕೂಡಿರದೆ ಪದೇ ಪದೇ ಒಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಮಾಹಿತಿ ನೀಡುವುದು) | ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಸಗಟು ನೀರು ಸರಬರಾಜು ಕಾಮಗಾರಿಯಡಿ 2014-15 ರಲ್ಲಿ ಪಾಪನಾಶಿ ಗ್ರಾಮದ ಹತ್ತಿರ ಇರುವ ನೀರು ಶುದ್ದೀಕರಣ ಘಟಕದಿಂದ ಗದಗ-ಬೆಟಗೇರಿ A-Point ವರೆಗೆ BWSC ಪೈಪ್‌ಲೈನ್ ಅನ್ನು ಅಳವಡಿಸಲಾಗಿರುತ್ತದೆ.<br><br>ಗದಗ-ಬೆಟಗೇರಿ ನಗರಸಭೆಗೆ ಅಮೃತ್-2.0 ಯೋಜನೆಯಡಿ ಅಂದಾಜು ಮೊತ್ತ ರೂ.34.00 ಕೋಟಿಗಳಲ್ಲಿ ನೀರು ಸರಬರಾಜು ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಭರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ನಅಇ 21 ಸಿಎಸ್‌ಎಸ್ 2023(1) ದಿನಾಂಕ:02-12-2023 ರಂದು ಆದೇಶಿಸಲಾಗಿದೆ.<br><br>ಅದರಂತೆ ಸರ್ವೇ ಕಾರ್ಯ ಕೈಗೊಂಡಿದ್ದು ಯೋಜನಾ ವರದಿ ತಯಾರಿಕಾ ಹಂತದಲ್ಲಿದೆ. ಶೀಘ್ರವಾಗಿ ಅಂದಾಜನ್ನು ಮಂಡಳಿಯ ತಾಂತ್ರಿಕ ಮತ್ತು ಟೆಂಡರ್ ಪರಿಶೀಲನಾ ಸಂಭೆಯಲ್ಲಿ ಮಂಡಿಸಿ ರಾಜ್ಯ ಮಟ್ಟದ ಉನ್ನತ ಸಂಚಾಲನಾ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗುವುದು. |

ಕಡತ ಸಂಖ್ಯೆ:ನಅಇ 18 ಪಿಆರ್‌ಜೆ 2024

12/02/2024
(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು